ಬಿ.ಎಲ್.ಡಿ.ಇ.ಸಂಸ್ಥೆಯ,

# ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ.

# ಭೂಗೋಳಶಾಸ್ತ್ರ ವಿಭಾಗ

## ಹೊನವಾಡ ಗ್ರಾಮದ ದ್ರಾಕ್ಷಿ ವ್ಯವಸಾಯಗಾರರ ಆರ್ಥಿಕ ಸ್ಥಿತಿ: ಒಂದು ಭೌಗೋಳಿಕ ವಿಶ್ಲೇಷಣೆ

ತಾಲೂಕ: ಜಿಲ್ಲೆ : ವಿಜಯಪುರ

ಸಂಶೋಧಕರು

ಬಿ.ಎ.ಅಂತಿಮ ವರ್ಷದ ವಿದ್ಯಾರ್ಥಿಗಳು

2016–2017

ಮಾರ್ಗದರ್ಶಕರು :

**ಶ್ರೀ. ಆರ್. ಬಿ. ಸಿರಸಂಗಿ.**

ಭೂಗೋಳಶಾಸ್ತ್ರ ವಿಭಾಗ,

ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ.

ಬಿ.ಎ.ಪದವಿಯ ಭಾಗಶಃ ಅವಶ್ಯಕತೆಗಳನ್ನು ಪೂರೈಸಲು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಸಲ್ಲಿಸಿದ ಪ್ರಬಂಧ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಪದವಿ ಅಧ್ಯಯನ ವಿಭಾಗ

ಬಿ.ಎಲ್.ಡಿ.ಇ.ಸಂಸ್ಥೆಯ,

# ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ.

# ಭೂಗೋಳಶಾಸ್ತ್ರ ವಿಭಾಗ

## ಹೊನವಾಡ ಗ್ರಾಮದ ದ್ರಾಕ್ಷಿ ವ್ಯವಸಾಯಗಾರರ ಆರ್ಥಿಕ ಸ್ಥಿತಿ:

## ಒಂದು ಭೌಗೋಳಿಕ ವಿಶ್ಲೇಷಣೆ

ತಾಲೂಕ: ಜಿಲ್ಲೆ : ವಿಜಯಪುರ

ಸಂಶೋಧಕರು

ಬಿ.ಎ.ಅಂತಿಮ ವರ್ಷದ ವಿದ್ಯಾರ್ಥಿಗಳು

**2016–2017**

ಮಾರ್ಗದರ್ಶಕರು :

ಶ್ರೀ. ಆರ್. ಬಿ. ಸಿರಸಂಗಿ.

ಭೂಗೋಳಶಾಸ್ತ್ರ ವಿಭಾಗ

ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ.

ಬಿ.ಎ.ಪದವಿಯ ಭಾಗಶಃ ಅವಶ್ಯಕತೆಗಳನ್ನು ಪೂರೈಸಲು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಸಲ್ಲಿಸಿದ ಪ್ರಬಂಧ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಪದವಿ ಅಧ್ಯಯನ ವಿಭಾಗ

# ಪ್ರಮಾಣ ಪತ್ರ

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ಬಿ.ಎ.ಅಂತಿಮ ವರ್ಷದ ವಿದ್ಯಾರ್ಥಿಗಳು 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಬಿ.ಎ.ಪದವಿಯ ಭಾಗಶಃ ಅವಶ್ಯಕತೆಗಳನ್ನು ಪೂರೈಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ನನ್ನ ಮಾರ್ಗದರ್ಶನದಲ್ಲಿ **"ಹೊನವಾಡ ಗ್ರಾಮದ ದ್ರಾಕ್ಷಿ ವ್ಯವಸಾಯಗಾರರ ಆರ್ಥಿಕ ಸ್ಥಿತಿ : ಒಂದು ಭೌಗೋಳಿಕ ವಿಶ್ಲೇಷಣೆ"** ಎಂಬ ವಿಷಯವನ್ನು ಅಧ್ಯಯನ ಮಾಡಿ ಸಲ್ಲಿಸಿದ ಪ್ರಬಂಧ. ಅಲ್ಲದೆ ಇದಕ್ಕಿಂತಲೂ ಮೊದಲು ಈ ವಿಷಯದ ಮೇಲೆ ಬೇರೆ ಕಡೆಗಳಲ್ಲಿ ಯಾರೂ ಪ್ರಬಂಧವನ್ನು ಮಂಡಿಸಿರುವುದಿಲ್ಲಾ ಅಥವಾ ಬೇರಾವುದೆ ಪತ್ರಿಕೆಯಲ್ಲಿ ಈ ವಿಷಯವು ಪ್ರಕಟವಾಗಿರುವುದಿಲ್ಲ ಎಂದು ಪ್ರಮಾಣಿಕರಿಸಲಾಗಿದೆ.

ಮಾರ್ಗದರ್ಶಕರು,
ಭೂಗೋಳಶಾಸ್ತ್ರ ವಿಭಾಗ,
ನೂತನ ಕಲಾ ಮಹಾವಿದ್ಯಾಲಯ,
ತಿಕೋಟಾ.

ಪ್ರಾಚಾರ್ಯರು
ನೂತನ ಕಲಾ ಮಹಾವಿದ್ಯಾಲಯ,
ತಿಕೋಟಾ.

# ಪರಿವಿಡಿ


| ಅ.ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| ಅಧ್ಯಾಯ–1 | ಕ್ಷೇತ್ರ ಕಾರ್ಯ ಹಾಗೂ ವೀಕ್ಷಣೆಯ ಹಿನ್ನಲೆ | 1–6 |
| ಅಧ್ಯಾಯ–2 | ಸಂಶೋಧನಾ ಕ್ಷೇತ್ರದ ಭೌಗೋಳಿಕ ಪರಿಚಯ | 7–9 |
| ಅಧ್ಯಾಯ–3 | ಸಂಶೋಧನೆಗಾಗಿ ಆಯ್ಕೆ ಮಾಡಿದ ವಿಷಯ | 10–11 |
| ಅಧ್ಯಾಯ–4 | ಹೊನವಾಡ ಗ್ರಾಮದ ದ್ರಾಕ್ಷಿ ವ್ಯವಸಾಯಗಾರರ ಆರ್ಥಿಕ ಸ್ಥಿತಿ: ಒಂದು ಭೌಗೋಳಿಕ ವಿಶ್ಲೇಷಣೆ | 12–33 |
| ಅಧ್ಯಾಯ–5 | ಉಪಸಂಹಾರ | 34–36 |
| | ಆಧಾರ ಗ್ರಂಥಗಳು | 37 |
| | ಅಡಕಗಳು | 38–42 |

# ಅಧ್ಯಾಯ-1
# ಕ್ಷೇತ್ರ ಕಾರ್ಯ ಹಾಗೂ ವೀಕ್ಷಣೆಯ ಹಿನ್ನಲೆ

ಕ್ಷೇತ್ರ ವೀಕ್ಷಣೆಯು ಪ್ರಾಚೀನ ಕಾಲದಿಂದ ಇಂದಿನವರೆಗೂ ಸಂಶೋಧನೆ ಪ್ರಕ್ರಿಯೆಯಲ್ಲಿ ಮಹತ್ವದ್ದಾಗಿದೆ. ಏಕೆಂದರೆ ಸಂಶೋಧನೆಗೆ ಆಯ್ಕೆ ಮಾಡಿದ ವಿಷಯದ ಕುರಿತು ಪ್ರಯೋಗಾಲಯಗಳಲ್ಲಿ ಕೈಗೊಂಡತೀರ್ಮಾನ ಹಾಗೂ ಉದ್ದೇಶಗಳ ಮೇಲ್ವಿಚಾರಣೆ ಹಾಗೂ ಹೋಲಿಕೆ ಮಾಡಲು ಆಯ್ದುಕೊಂಡ ಭೂಭಾಗದ ಕ್ಷೇತ್ರ ವೀಕ್ಷಣೆ ಮಾಡುವುದು ಅವಶ್ಯಕವಾಗಿದೆ. ಆಯಾ ಪ್ರದೇಶದ ಸಮಸ್ಯೆಗಳನ್ನು ಅರಿತುಕೊಂಡು ಅವುಗಳ ಮೌಲ್ಯೀಕರಣ ಮಾಡಲು ಸುಲಭವಾಗುವುದು. ಉದಾಹರಣೆಗೆ ಸಂಶೋಧಕನು ಕೃಷಿ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ, ಮಾನವ ಸಂಪನ್ಮೂಲದ ಅಭಿವೃದ್ಧಿ ಮೂಲಸೌಲಭ್ಯಗಳ ಬಳಕೆ. ಉದಾಹರಣೆಯಲ್ಲಿನ ವಿಷಯಗಳನ್ನು ಆಯ್ಕೆ ಮಾಡಿಕೊಂಡಾಗ ಆಯಾ ವಿಷಯಗಳಿಗೆ ಸಂಬಂಧಿಸಿದ ಕ್ಷೇತ್ರಗಳ ನಕಾಶದ ಜೊತೆಗೆ ಆ ಕ್ಷೇತ್ರದ ತಿಳುವಳಿಕೆಯು ಅವಶ್ಯಕವಾಗಿರುತ್ತದೆ. ಈ ಕ್ಷೇತ್ರ ಕಾರ್ಯವು ಒಂದು ಪ್ರದೇಶದ ಅಧ್ಯಯನದ ಸೈದ್ಧಾಂತಿಕವಾಗಿದ್ದು ಸ್ಥಳಗಳಿಗೆ ಸ್ವಯಂ ಭೇಟ್ಟಿಕೊಟ್ಟಾಗ ಮಾತ್ರ ಪ್ರತ್ಯಕ್ಷವಾದ ಹಾಗೂ ನಿಜವಾದ ಮಾಹಿತಿ ದೊರೆಯುವುದು.

ಉದಾಹರಣೆಗೆ ನಕ್ಷೆಗಳಿಂದ ತಿಳಿದ ಮೇಲ್ಮೈ ಲಕ್ಷಣಗಳ ಜ್ಞಾನವನ್ನು ನಿಜವಾಗಿ ಆ ಸ್ಥಳವನ್ನು ವೀಕ್ಷಿಸಿ ಪಡೆಯಬಹುದು. ಅಲ್ಲದೆ ಕ್ಷೇತ್ರಗಳ ಸಂಗತಿಯೊಂದಿಗೆ ವಿಸ್ತೃತ ಹೋಲಿಕೆಯನ್ನು ಮಾಡಿ ಪೂರ್ಣಗೊಳಿಸಬಹುದು. ಇದರ ಜೊತೆಗೆ ಆ ಪ್ರದೇಶದಲ್ಲಿರುವ ಮಾನವನ ಚಟುವಟಿಕೆಗಳು ಹಾಗೂ ಪರಿಸರದ ಪ್ರಭಾವವನ್ನು ನಿಸರ್ಗದ ನಿಯಂತ್ರಣವನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ. ಇದನ್ನು ಈ ಕ್ಷೇತ್ರ ವೀಕ್ಷಣೆಯಿಂದ ಮತ್ತು ಕ್ಷೇತ್ರ ಕಾರ್ಯದಿಂದ ತಿಳಿದುಕೊಳ್ಳಬಹುದು. ಅದಕ್ಕಾಗಿಯೇ ಭೂಗೋಳಶಾಸ್ತ್ರದಲ್ಲಿ ಕ್ಷೇತ್ರ ಅಧ್ಯಯನಕ್ಕೆ ಅತಿ ಮಹತ್ವವನ್ನು ಕೊಡಲಾಗುತ್ತಿದೆ. ಇದರಿಂದ ಆ ಪ್ರದೇಶದ ಭಿನ್ನತೆಯನ್ನು ಹೋಲಿಕೆಗಳನ್ನು ಉದ್ದೇಶಗಳನ್ನು ಅರಿತುಕೊಳ್ಳಬಹುದು. ಕ್ಷೇತ್ರ ವೀಕ್ಷಣೆಯ ಮತ್ತು ಕ್ಷೇತ್ರ ಕಾರ್ಯದಲ್ಲಿ ಭೌಗೋಳಿಕ ವಿಶ್ಲೇಷಣೆಯ ಆಧಾರದ ಮೇಲಿಂದ ಸಂಶೋಧನಾ ಪ್ರದೇಶದ ಪ್ರಾದೇಶಿಕ ವಿಶ್ಲೇಷಣೆಯನ್ನು ಮಾಡಲು ಸಾಧ್ಯವಾಗುವುದಲ್ಲದೆ ಭೂಗೋಳಶಾಸ್ತ್ರ ವಿದ್ಯಾರ್ಥಿಗಳಿಗೆ ವಿಷಯದ ಮೂಲಭೂತ ಸಿದ್ಧಾಂತಗಳ ಜ್ಞಾನ ದೊರಕುವುದು.

# ಅಂಕಿ ಸಂಖ್ಯೆಗಳ ಸಂಗ್ರಹದಲ್ಲಿ ತೊಡಗಿದ ವಿದ್ಯಾರ್ಥಿಗಳು ಹಾಗೂ ಹೊನವಾಡ ಗ್ರಾಮಸ್ಥರ ಪೋಟೊಗಳು











